50 ಶ್ರೀ ನಾಡಗೌಡ ವೆಂಕಟರಾವ್ (ಕೃಷ್ಣರಾಜನಗರ)
ಕಂದಾಯ ಸಚಿವರು.

ಅ) ಕಳೆದ ಮೂರು ವರ್ಷಗಳಿಂದ (31-05-2009ರವರೆಗೆ) ರಾಯಚೂರು ಜಿಲ್ಲೆಯಲ್ಲಿ ಪೋಡಿಯಾಗದೆ ಉಳಿದಿರುವ ಪ್ರಕರಣಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರಗಳನ್ನು ನೀಡುವುದು);

ಕಳೆದ ಮೂರು ವರ್ಷಗಳಿಂದ ರಾಯಚೂರು ಜಿಲ್ಲೆಯಲ್ಲಿ ಪೋಡಿಯಾಗದೆ ಉಳಿದಿರುವ ಪ್ರಕರಣಗಳ ಒಟ್ಟು ಸಂಖ್ಯೆ: 7223 ತಾಲ್ಲೂಕುವಾರು ವಿವರ ಈ ಕೆಳಕಂಡಂತೆ ಇರುತ್ತದೆ.

ಕ್ರ ಸಂ	ತಾಲ್ಲೂಕು	2007-08	2008-09	2009-10
1	ರಾಯಚೂರು	598	375	730
2	ಮಾನ್ವಿ	475	371	472
3	ದೇವದುರ್ಗ	329	284	396
4	ಲಿಂಗಸಗೂರು	303	517	623
5	ಸಿಂಧನೂರು	346	630	574
	ಒಟ್ಟು	2051	2377	2795

ಆ) ಇದರಿಂದ ಜಿಲ್ಲೆಯ ರೈತರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಹೌದು

ಇ) ಬಂದಿದ್ದಲ್ಲಿ, ಇದನ್ನು ಸರಿಪಡಿಸಲು ಸರ್ಕಾರ ಕೈಗೊಂಡ ಕ್ರಮವೇನು (ವಿವರ ನೀಡುವುದು);

ಸರ್ಕಾರ ತತ್ಕಾಲ್ ಯೋಜನೆಯನ್ನು ಜಾರಿಗೆ ತಂದಿದ್ದು. ಸಮಸ್ಯೆ ಇಲ್ಲದ ಪ್ರಕರಣಗಳನ್ನು ಒಂದು ತಿಂಗಳ ಅವಧಿಯಲ್ಲಿ ಮತ್ತು ಸಮಸ್ಯೆ ಇರುವ ಪ್ರಕರಣಗಳನ್ನು ಎರಡು ತಿಂಗಳ ಅವಧಿಯಲ್ಲಿ ಅಂತಿಮಗೊಳಿಸಲಾಗುವುದು. ತತ್ಕಾಲ್ ಯೊಜನೆ ಮತ್ತು 11ಇ ಸ್ಕೆಚ್ ಫೀ ಯಿಂದ ಉಳಿತಾಯವಾದ ಹಣದಿಂದ ಬಾಕಿ (backlog) ಇರುವ ಪೋಡಿ ಪ್ರಕರಣಗಳನ್ನು ಉಚಿತವಾಗಿ ಇತ್ಯರ್ಥ ಮಾಡಲು ಉಪಯೋಗಿಸಲಾಗುತ್ತದೆ.

ಈ) ಹಾಗಿದ್ದಲ್ಲಿ, ಈ ತೊಂದರೆಯನ್ನು ತ್ವರಿತವಾಗಿ ವಿಲೇವಾರಿ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ತ್ವರಿತ ಕ್ರಮ ಕೈಗೊಳ್ಳಲಾಗುವುದು

51 ಶ್ರೀ ನಾಡಗೌಡ ವೆಂಕಟರಾವ್ (ಸಿಂಧನೂರು ಕ್ಷೇತ್ರ)
ಮಾನ್ಯ ಸಣ್ಣ ನೀರಾವರಿ, ಯೋಜನೆ ಹಾಗೂ ಸಾಂಖ್ಯಿಕ ಸಚಿವರು.

ಅ) ಡಾ॥ ಡಿ.ಎಂ.ನಂಜುಂಡಪ್ಪ ವರದಿಯ ಆಧಾರದ ಮೇಲೆ ರಾಯಚೂರು ಜಿಲ್ಲೆಯ ವಿವಿಧ ಇಲಾಖೆಗಳಿಗೆ ಒದಗಿಸಿರುವ ಅನುದಾನದ ಮೊತ್ತ ಎಷ್ಟು (ತಾಲ್ಲೂಕುವಾರು ಹಾಗೂ ಇಲಾಖಾವಾರು ವಿವರಗಳನ್ನು ನೀಡುವುದು)